ದಾವಣಗೆರೆಯನ್ನು ಜಿಲ್ಲಾ ಕೇಂದ್ರವಾಗಿ ನಿರ್ಮಾಣ

3534 - ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಕೇಂದ್ರ ಬಿಂದುವಾಗಿ ರಾಜ್ಯದ ರಾಜಧಾನಿಯಾಗಲು ಸಕಲ ಅರ್ಹತೆಯನ್ನು ಹೊಂದಿರುವ ದಾವಣಗೆರೆಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿ ಹೊಸ ಜಿಲ್ಲೆ ರಚಿಸುವುದಾಗಿ ಹಿಂದಿನ ಅಧಿವೇಶನದಲ್ಲಿ ಸರ್ಕಾರ ನೀಡಿರುವ ಭರವಸೆಯು ಕಾರ್ಯಗತವಾಗದಿರಲು ಕಾರಣವೇನೆಂಬುದನ್ನು ಸ್ಪಷ್ಟಪಡಿಸುವಿರಾ?

ಆ) ಜಿಲ್ಲೆ ರಚನೆಯಾಗಲು ಇರುವ ಅಡೆತಡೆಗಳೇನೆಂಬುದನ್ನು ತಿಳಿಯಲು ಸಾಧ್ಯವೇ?

ಇ) ಸುಮಾರು ಇಪ್ಪತ್ತು ವರ್ಷಗಳಿಂದ ಕಾತುರರಾಗಿ ನಿರೀಕ್ಷಿಸುವ ಆ ಭಾಗದ ಜನರ ಆಶೋತ್ತರಗಳಿಗೆ ಪ್ರತಿಸ್ಪಂದಿಸುವುದು ತಡವಾದರೆ ಜನರ ಆಕ್ರೋಶದ ದುಷ್ಪರಿಣಾಮಗಳಿಗೆ ಕಾರಣವಾದೀತೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಆಡಳಿತಾತ್ಮಕ ಮತ್ತು ಆರ್ಥಿಕ ಕಾರಣಗಳಿಂದ.

ಆ) ಹೆಚ್ಚಿನ ಅಡೆತಡೆಗಳೇನಿಲ್ಲ ಆದಷ್ಟು ಬೇಗ ರಚಿಸುವ ಪ್ರಾಮಾಣಿಕ ಪ್ರಯತ್ನ ನಡೆಯುತ್ತದೆ.

ಇ) ಹೆಚ್ಚು ತಡವಾಗಲಾರದು.

ಶ್ರೀ ವೈ.ಎಂ. ವೀರಣ್ಣ : ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಆಡಳಿತಾತ್ಮಕ ಮತ್ತು ಆರ್ಥಿಕ ಕಾರಣಗಳಿಂದ ಹೆಚ್ಚಿನ ಅಡೆತಡೆಗಳೇನಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಹೆಚ್ಚಿನ ಅಡೆತಡೆಗಳಿಲ್ಲ. ಮತ್ತು ಆಡಳಿತಾತ್ಮಕವಾದ ಮತ್ತು ಆರ್ಥಿಕವಾಗಿ ಎಂದು ಪ್ರಸ್ತಾಪ ಮಾಡಿರುವುದರಿಂದ ಹೇಳುತ್ತಿದ್ದೇನೆ. ದಾವಣಗೆರೆ ನಗರ ಬಹಳ ವರ್ಷಗಳಿಂದ ಜಿಲ್ಲೆ ಆಗಬೇಕೆಂದು ಇದೆ ಹಾಗಿದ್ದಲ್ಲಿ ಅವರಿಗೆ ಆಡಳಿತಾತ್ಮಕವಾದ ಸೌಲಭ್ಯಗಳು ಬೇಕಾದಲ್ಲಿ ಕಛೇರಿಗೆ ಬೇಕಾದ ಒಂದು ಬೃಹತ್ ಕಟ್ಟಡ ಇದೆ ಮತ್ತು ಆರ್ಥಿಕವಾಗಿ ಅಲ್ಲಿ ಸೌಲಭ್ಯ ದೊರಕುವುದಕ್ಕೆ ನಮ್ಮ ಸಹಕಾರ ಬೇಕಾಗಿದ್ದರೆ ದಾವಣಗೆರೆಯನ್ನು ಜಿಲ್ಲೆ ಮಾಡಿ ಇದನ್ನು ತಕ್ಷಣ ಜಾರಿಗೊಳಿಸುವುದಕ್ಕೆ ತೀರ್ಮಾನ ಕೈಗೊಳ್ಳುವುದಾದರೆ ನಾವು ಸಹಕಾರ ಮಾಡುತ್ತೇವೆ. ಸಾರ್ವಜನಿಕರಿಂದ ಬೆಂಬಲ ಕೊಡಿಸಿ ಜಿಲ್ಲೆ ಆಗುವುದಕ್ಕೆ ಸಹಕಾರಿಗಳಾಗಿ ನಿಲ್ಲುತ್ತೇವೆ. ಈ ದೃಷ್ಟಿಯಿಂದ ಅವರು ಕಾರ್ಯೋನ್ಮುಖರಾಗುತ್ತಾರೆಯೇ ಮತ್ತು ಜಾರಿಗೊಳಿಸುತ್ತಾರೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಅವರಿಗೆ ಗೊತ್ತಿದೆ ದಾವಣಗೆರೆ ಜಿಲ್ಲೆ ಮಾಡಬೇಕೆಂಬುದಕ್ಕೆ ಎಲ್ಲಾ ಸಮಿತಿಗಳೂ ಶಿಫಾರಸ್ಸು ಮಾಡಿವೆ. ಮತ್ತು ಇದನ್ನು ಘೋಷಣೆ ಮಾಡುವುದು ಸದ್ಯಕ್ಕೆ ಆಗಿಲ್ಲ. ಕಾರಣ ಈಗಾಗಲೇ ಹೇಳಿದಹಾಗೆ ಆರ್ಥಿಕಸ್ಥಿತಿ ಬಹಳ ಕಷ್ಟದಲ್ಲಿದ್ದ ಕಾರಣ ಒಂದು ಜಿಲ್ಲೆಯನ್ನು ಘೋರಂ ಮಾಡಬೇಕಾದರೆ ಕನಿಷ್ಟ ಎರಡೂವರೆ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಕ್ಕಾಗಿ ಸದ್ಯದಲ್ಲಿ ಅಷ್ಟು ಹಣವನ್ನು ಖರ್ಚುಮಾಡಿ ಜಿಲ್ಲೆ ಮಾಡುವುದಕ್ಕಾಗುವುದಿಲ್ಲವೆಂದು ಮುಂದೂಡಿದ್ದೇವೆ. ಆದರೆ ಸಮಿತಿಯ ಶಿಫಾರಸ್ಸನ್ನು ಒಪ್ಪಿಕೊಂಡಿದ್ದೇವೆ. ಮತ್ತು ಯಾವಾಗ ಜಿಲ್ಲೆಗಳನ್ನು ಘೋರಂ ಮಾಡುತ್ತೇವೆ, ಆಗ ದಾವಣಗೆರೆಯನ್ನು ಖಂಡಿತವಾಗಿ ಸೇರಿಸುತ್ತೇವೆ.

ಶ್ರೀ ವೈ.ಎಂ. ವೀರಣ್ಣ : ಸುಮಾರು ಮೂರೂವರೆ ದಶಕಗಳಿಂದಲೂ ಪ್ರಯತ್ನ ಮಾಡುತ್ತಿದ್ದೇನೆ. ಒಂದು ಸಣ್ಣ ಕೆಲಸಕ್ಕೂ ಚಿತ್ರದುರ್ಗಕ್ಕೆ ಹೋಗಬೇಕಾದ ಅವ್ಯವಸ್ಥೆ ಇದೆ. ಅಲ್ಲಿಯ ಜನರು ಬೇಕಾದ ಸಹಕಾರ ಕೊಡುವುದಕ್ಕೆ ಮುಂದೆ ಬಂದಿದ್ದಾರೆಂದು

ಹೇಳಿದರೂ ಕೂಡ ಕಾರಣಗಳನ್ನು ಹೇಳುತ್ತಾ ಮುಂದೆ ಹಾಕುತಿದ್ದಾರೆ. ಇದರ ಬಗ್ಗೆ ಸರಿಯಾದ ನಿಲುವನ್ನು ತೆಗೆದುಕೊಂಡು ಅತಿ ಜಾಗ್ರತೆಯಾಗಿ ಜಿಲ್ಲೆ ಮಾಡುವುದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಟ್ಟರೆ ಅಲ್ಲಿ ಇರತಕ್ಕ ಜನರಿಗೆ ನೆಮ್ಮದಿ ಸಿಗುತ್ತದೆ. ಆ ದೃಷ್ಟಿಯಿಂದ ತಮ್ಮ ಆದೇಶವನ್ನು ಯಾವಾಗ ಜಾರಿ ಮಾಡುತ್ತೀರಿ ಸಮಾಜವಾದ ಉತ್ತರವನ್ನು ಮಾನ್ಯ ಸಚಿವರಿಂದ ಅಪೇಕ್ಷೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರ ಪ್ರಯತ್ನ ಬಹುಬೇಗನೆ ಸಫಲವಾಗುತ್ತದೆ. ಆದಷ್ಟು ಬೇಗ ಮಾಡತಕ್ಕಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ವಿಶ್ವನಾಥಯ್ಯ : ಮಾನ್ಯ ಸಚಿವರು ಆಡಳಿತಾತ್ಮಕ ಕಾರಣಗಳಿಂದ ಜಿಲ್ಲೆಯನ್ನು ರಚನೆ ಮಾಡುವುದಕ್ಕೆ ವಿಳಂಬವಾಗಿದೆ ಎಂದು ಹೇಳಿದ್ದಾರೆ. ಆಡಳಿತಾತ್ಮಕ ಕಾರಣ ಎಂದರೆ ಏನು ಎಂದು ಮೊದಲನೆಯದಾಗಿ ಕೇಳಬಯಸುತ್ತೇನೆ. ಅಲ್ಲಿಯ ಜನ ಜಿಲ್ಲೆ ಮಾಡುವುದಕ್ಕೆ ಬೇಕಾದ ಕಟ್ಟಡವನ್ನು ಕಟ್ಟಿಸಿಕೊಡುತ್ತಾರೆ ಅಥವಾ ಕಟ್ಟಡವನ್ನು ಕೊಡುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಎರಡನೆಯದಾಗಿ ಹೆಚ್ಚು ತಡವಾಗಬಾರದು. ಒಂದು ಜಿಲ್ಲೆ ಮಾಡುವುದಕ್ಕೆ ಎರಡೂವರೆ ಕೋಟಿ ಖರ್ಚು ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಈಗಾಗಲೇ 5-6ಜಿಲ್ಲೆಗಳ ಪ್ರಸ್ತಾವನೆ ಸರ್ಕಾರದಲ್ಲಿದೆ. ಇವುಗಳನ್ನು ಹಂತಹಂತವಾಗಿ ಮಾಡುವುದರಿಂದ ಏನೂ ಹೆಚ್ಚು ಹಣ ಆಗುವುದಿಲ್ಲ. ಪ್ರತಿವರ್ಷವೂ ಹಂತಹಂತವಾಗಿ ಜಿಲ್ಲೆಗಳನ್ನು ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ ಇದ್ದರೆ ಎಷ್ಟು ದಿವಸದಲ್ಲಿ ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಂತಹಂತವಾಗಿ ಮಾಡುವುದಕ್ಕಾಗಿಯೇ ಸಚಿವಸಂಪುಟದ ಸಮಿತಿ ಮಾಡಿದ್ದೇವೆ. ಇದಾದಮೇಲೆ ಅಫಿಷಿಯಲ್ ಕಮಿಟಿ ಕೂಡ ಮಾಡಿದ್ದೇವೆ. ಇದರಲ್ಲಿ ಸೆಕ್ರೆಟರಿ-2, ಸೆಕ್ರಟರಿ, ಫೈನಾನ್ಸ್, ಸೆಕ್ರೆಟರಿ ರೂರಲ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್‌ರಾಜ್ ಮತ್ತು ಸೆಕ್ರಟರಿ ಲಾ ಅಂಡ್ ಪಾರ್ಲಿಮೆಂಟರಿ ಅಫೆರ್ಸ್ ಈ ನಾಲ್ಕು ಜನರು ಸೇರಿರತಕ್ಕ ಕಮಿಟಿ ಕೂಡ ಮಾಡಿದ್ದೇವೆ. ಇವರು ಎಲ್ಲಾ ಜಿಲ್ಲೆಗಳಿಗೂ ಹೋಗಿ ಅಡ್ಮಿನಿಸ್ಟ್ರೇಟಿವ್ ರೀತಿಯಿಂದ ಕಟ್ಟಡವಾಗಲೀ ಮತ್ತು ಬೈಫರ್‌ಕೇಷನ್ ಆಫ್ ಸ್ಟಾಫ್ ಯಾವ ರೀತಿಯಾಗಿ ಮಾಡಬೇಕು. ಮತ್ತು 9 ಜಿಲ್ಲೆಗಳ ಬಗ್ಗೆ ಏನು ಆಗಿದೆ. ಇದರಲ್ಲಿ ಹಂತಹಂತವಾಗಿ ಮಾಡಬೇಕೆನ್ನುವ ದೃಷ್ಟಿಯಿಂದಲೇ ಈ ಒಂದು ಸಬ್‌ಕಮಿಟಿ ಮಾಡಿ ಅಫಿಷಿಯಲ್ ಕಮಿಟಿ ಕೂಡ ಮಾಡಿದ್ದೇವೆ. ಆದಷ್ಟುಬೇಗ ಹಣಕಾಸಿನ ಪರಿಸ್ಥಿತಿ ಸುಧಾರಣೆಯಾದ ಮೇಲೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ತಾವು ಏನು ಹೇಳಿದ್ದೀರಿ ಎಂದರೆ ದಾವಣಗೆರೆಯಲ್ಲಿರತಕ್ಕಂಥವರು ಕೆಲವು ಸವಲತ್ತುಗಳನ್ನು ಕೊಡುವುದಕ್ಕೆ ತಯಾರಿದ್ದಾರೆ. ತಾತ್ಕಾಲಿಕವಾಗಿ ಕಟ್ಟಡ ಕೊಡಬಹುದು. ಆದರೆ ಸ್ಯಾಲರಿ ಅವರು ಕೊಡುವುದಕ್ಕಾಗುವುದಿಲ್ಲ. ನಾವೇ ಪ್ರಾವಿಷನ್ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿಯೇ ಹೇಳಿದೆ. ಜಿಲ್ಲೆ ಆಗಬೇಕೆಂದು ತಮಗೆ ಎಷ್ಟು ಆತುರ ಇದೆ ಇದು ಆದರೆ ನಮಗೂ ಕೂಡ ಒಳ್ಳೆಯದಾಗುತ್ತದೆ. ಬಹುಬೇಗನೆ ಮಾಡಬೇಕೆಂದು ಇದೆ.

ಶ್ರೀ ಎಸ್.ಎಂ. ಯಾಹ್ಯಾ : ಈ ಪ್ರಶ್ನೆ ದಾವಣಗೆರೆ ಮಾಡಬೇಕೆನ್ನುವುದಕ್ಕೆ ನೀಮಿತವಾದರೂ ಸರಕಾರದ ನೀತಿ ಈ ವಿಚಾರದಲ್ಲಿ ಏನಿದೆ. ವಿತಕ್ಕೆಂದು ಹೇಳಿದರೆ ಈ ವಿಚಾರದಲ್ಲಿ ಎರಡು ಕಮೀಷನ್ ಮಾಡಿ ಹೊಸ ಹೊಸ ಜಿಲ್ಲೆಗಳನ್ನು ಮಾಡಬೇಕೆಂದು ರೆಕಮೆಂಡೇಷನ್ ಸಹ ಬಂತು. ಆ ರೆಕಮೆಂಡೇಷನ್‌ಗಳನ್ನು ಸಹ ಆಗಿನ ಸರಕಾರಗಳು ಒಪ್ಪಿಕೊಂಡವು. ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್ ಬರಬೇಕಾದರೆ ಹೊಸ ಹೊಸ ಜಿಲ್ಲೆಗಳನ್ನು ಮಾಡಬೇಕೆನ್ನುವುದು ಸರಕಾರದ ನೀತಿ. ಹೊಸ ಜಿಲ್ಲೆಗಳು

ಬರುವ ವಿಚಾರದಲ್ಲಿ ಈ ಸರಕಾರದ ನೀತಿ ಏನಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈ ಸರಕಾರದ ನೀತಿ ಕೂಡ ಹೊಸ ಜಿಲ್ಲೆಗಳನ್ನು ಮಾಡಬೇಕು ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್ ಆಮೇಲೆ ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದಕ್ಕಾಗಲೀ ಡೆವಲಪ್‌ಮೆಂಟ್ ದೃಷ್ಟಿಯಿಂದ ಆಗಲೀ ಹೊಸ ಜಿಲ್ಲೆಗಳನ್ನು ಮಾಡಬೇಕೆಂಬ ದೃಷ್ಟಿಯಿಂದ ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿರುತ್ತೇವೆ. ಮತ್ತು ಆಫಿಯಲ್ ಸಬ್‌ಕಮಿಟಿ ಮಾಡಿದ್ದೇವೆ. ಆದಷ್ಟು ಬೇಗನೆ ಕ್ರಮ ಕೈಗೊಳ್ಳಬೇಕೆನ್ನುವ ದೃಷ್ಟಿಯಿಂದ ನಾವು ಪೆಚ್ಚಿಯನ್ನು ಹಾಕುತ್ತೇವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸರ್ವೇಯರ್ಸ್‌ಗಳ ಹುದ್ದೆಗಳ ಭರ್ತಿ

3529- ಶ್ರೀ ಎ. ವಿ. ಉಮಾಪತಿ (ಹೊಳಲ್ಕೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಮಟ್ಟದಲ್ಲಿ ಎಷ್ಟು ಜನ ತಾಲ್ಲೂಕು ಸರ್ವೇಯರ್ಸ್ ಇದ್ದಾರೆ (ಖಾಲಿ ಇರುವ ಸ್ಥಳಗಳ ಬಗ್ಗೆ ವಿವರ ನೀಡುವುದು)

ಆ) ಹೋಬಳಿ ಮಟ್ಟದ ಸರ್ವೇಯರ್ಸ್ ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿರುವರೇ?

ಇ) ಈಗ ಖಾಲಿಯಿರುವಂತಹ ಹುದ್ದೆಗಳೆಷ್ಟು?

ಈ) ತಾಲ್ಲೂಕು ಮಟ್ಟದಲ್ಲಿ ಖಾಲಿ ಇರುವ ಸರ್ವೇಯರ್ ತುಂಬಲು ಸರ್ಕಾರವೇನಾದರೂ ಕ್ರಮ ಕೈಗೊಂಡಿದೆಯೇ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಒಂಬತ್ತು ತಾಲ್ಲೂಕು ಸರ್ವೇಯರ್ ಇದ್ದಾರೆ. (ಖಾಲಿ ಸ್ಥಳಗಳು ಇರುವುದಿಲ್ಲ)

ಆ) ಹೌದು.

ಇ) ಒಂದು.

ಈ) ತಾಲ್ಲೂಕು ಮಟ್ಟದಲ್ಲಿ ಯಾವ ಹುದ್ದೆಗಳೂ ಖಾಲಿ ಇರುವುದಿಲ್ಲ.

ಶ್ರೀ ಎ.ವಿ. ಉಮಾಪತಿ : ಸನ್ಮಾನ್ಯ ಅಧ್ಯಕ್ಷರೇ ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಮಟ್ಟದಲ್ಲಿ ಎಷ್ಟು ಜನ ತಾಲ್ಲೂಕು ಸರ್ವೇಯರ್ಸ್ ಇದ್ದಾರೆ ಎಂದು ಕೇಳಿದ್ದೆ ಎಲ್ಲಾ ತಾಲ್ಲೂಕುಗಳಲ್ಲಿ ಇದ್ದಾರೆ ಎಂದು ಉತ್ತರ ಒದಗಿಸಿದ್ದಾರೆ. ಆದರೆ ಎಷ್ಟು ಜನ ಇದ್ದಾರೆ. ಎಂಬ ಉತ್ತರವನ್ನು ಅವರು ಕೊಟ್ಟಿಲ್ಲ. ಹೋಬಳಿ ಮಟ್ಟದ ಸರ್ವೇಯರ್ಸ್ ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲೋಕಿನಲ್ಲಿರುವರೇ ಎಂಬುದಕ್ಕೆ ಹೌದು ಎಂಬ ಉತ್ತರ ಕೊಟ್ಟಿದ್ದಾರೆ. ಖಾಲಿ ಇರುವ ಹುದ್ದೆಗಳು ಎಷ್ಟು ಎಂದು ಕೇಳಿದ್ದೆ ತಾಲ್ಲೂಕಿನಲ್ಲಿ ಅಥವಾ ಜಿಲ್ಲೆಯಲ್ಲಿ ಒಂದೇ ಒಂದು ಖಾಲಿ ಇರತಕ್ಕಂಥಾದ್ದು ಎಂಬ ವಿಚಾರ ತಿಳಿಸಿದ್ದಾರೆ. ಹೊಳಲ್ಕೆರೆ ತಾಲೋಕಿನಲ್ಲಿ ಎಷ್ಟು ಜನ ಸರ್ವೇಯರ್ಸ್ ಇದ್ದಾರೆ ಮತ್ತು ಖಾಲಿ ಇರತಕ್ಕಂಥ ಹುದ್ದೆಗಳು ಎಷ್ಟು ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ ಚಿತ್ರದುರ್ಗ ಜಿಲ್ಲೆಯ ಬಗ್ಗೆ ಕೇಳಿದುದನ್ನು ಹೇಳಿದ್ದೇನೆ ಸ್ಯಾಂಕ್ಷನ್‌ಡ್ ಸ್ಟ್ರೆಂಥ್ ಚಿತ್ರದುರ್ಗ ಸಬ್‌ಡಿವಿಷನ್ 26 ದಾವಣಗೆರೆ ಸಬ್‌ಡಿವಿಜನ್ 25 ಒಟ್ಟು 51 ಸರ್ವೇಯರ್ಸ್ ಅಲ್ಲಿದ್ದಾರೆ. ಒಂದು ಹುದ್ದೆ ಮಾತ್ರ ಖಾಲಿ ಇದೆ. ಇನ್ನು 50 ಜನ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎ.ವಿ. ಉಮಾಪತಿ : ಸನ್ಮಾನ್ಯ ಅಧ್ಯಕ್ಷರೇ ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೊಳಲ್ಕೆರೆ ತಾಲೋಕಿನಲ್ಲಿ ಸುಮಾರು ಒಂದೂವರೆ ವರ್ಷದಿಂದ ನಾನು ಪ್ರಯತ್ನ